Sri RAMAKRISHNA HEDGE.—Already certain persons have been charge-sheeted. The secretary was the custodian of the account books cash and other materials in the office.

Sri B. P. KADAM.—Since how many months the cash is missing?

Sri RAMAKRISHNA HEGDE.—First, it was noticed on 8-10-63.

ಶ್ರೀ ಕೆ. ಲಕ್ಕಪ್ಪ.—ಈ ಸಹಕಾರ ಬ್ಯಾಂಕು ಯಾವ ವರ್ಷ ರಿಜಿಸ್ಟರು ಆಯಿತು? ಇದಕ್ಕೆ ಕೊಟ್ಟ ಹಣವೆಷ್ಟು? ಇದುವರೆಗೂ ಇದು ಮಾಡಿರುವ ವ್ಯವಹಾರವೇನು?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದು ಯಾವಾಗ ರಿಜಿಸ್ಟರು ಆಯಿತು ಎಂದು ಹೇಳುವುದಕ್ಕೆ ಆಗಾಧ್ಯ. ಸರ್ಕಾರದಿಂದ ಇದಕ್ಕೇನೂ ಹಣವನ್ನು ಕೊಟ್ಟಿಲ್ಲ. ಸ್ವತಂತ್ರವಾಗಿ ಬ್ಯಾಂಕಿನವರೇ ಪ್ರಾರಂಭಮಾಡಿದಂಥ ಸಹಕಾರ ಬ್ಯಾಂಕು ಇದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ —(ಎ)ಗೆ ಉತ್ತರವಾಗಿ ಕೆಲವು ಲೆಕ್ಕಪತ್ರಗಳ ಪುಸ್ತಕಗಳು ನಾಪತ್ತೆಯಾಗಿವೆಯೇ ವಿನಾ ಎಂದು ಹೇಳಿ ಸ್ವಲ್ಪ ಹಣ ಸಹ ಕಳುವಾಗಿವೆ ಎಂದು ಮತ್ತೆ ಹೇಳಿರುವುದರಿಂದ ಲೆಕ್ಕದಲ್ಲ ತಪ್ಪಿದೆ ಎಂದರ್ಥವಾಗುವುದಿಲ್ಲವೆ?

Sri RAMAKRISHNA HEGDE.—I can give the list of the books that are missing, Cash balance book, Members deposite ledger and insurance canvass books. These are the books missing and I cannot give the exact amount involved as enquiry is still in progress.

Sri V. S. PATIL.—May I know whether this matter is in the hands of the police or it is pending before a Court. If it is before a court, what is the report of the police about the missing amount. what is the amount misappropriated?

Mr. SPEAKER.—The case is *sub judice*.

Sri V. S. PATIL.—I am not going into the merits of the case. I want to know the amount misappropriated, according to the police authorities.

Sri RAMAKRISHNA HEGDE.—The figure is not available. The police have charge sheeted under sections 457 381, 109, 34 etc.

Mr. SPEAKER.—If the Minister has copy of the charge sheet, he may tell the amount involved.

Sri RAMAKRISHNA HEGDE.—It is not here, Sir.

ಶ್ರೀ ಬಿ. ಎಸ್. ಗೌಡ.—ಮಾನ್ಯ ಮಂತ್ರಿಗಳು ಹೇಳಿದರು, ಆ ಸೊಸೈಟಿಗೆ ಸರ್ಕಾರದವರು ಸಾಲವನ್ನು ಕೊಟ್ಟಿಲ್ಲ ಎಂದು. ಹಾಗಾದರೆ ಕೇಂದ್ರದ ಸಹಕಾರ ಬ್ಯಾಂಕಿನಿಂದಲಾಗಲಿ ಜಿಲ್ಲಾ ಬ್ಯಾಂಕಿನಿಂದಲಾಗಲೀ ಆ ಸೊಸೈಟಿಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ?

Sri RAMAKRISHNA HEGDE.—I want notice.

Murders committed in Channapatna Taluk for the past three years.

*Q.—80. Sri B. J. LINGE GOWDA (Channapatna).—

Will the Government be pleased to state :—

(*a*) the number of murders committed in Channapatna Taluk for the past 3 years ;

(*b*) the number of cases in which convictions were awarded during the period ?

A.—**Sri R. M. PATIL** (Minister for Home).—

(*a*)	*Year*		*Number of murder cases reported.*
	1961	...	1
	1962	...	2
	1963	...	2
(*b*)	1961	...	Nil
	1962	...	Nil
	1963	...	Of the two cases reported during this year, one is *sub-judice* and the other is still under Police investigation.

ಶ್ರೀ ಬಿ. ಜೆ. ಲಿಂಗೇಗೌಡ—1961 ನೇ ಇಸವಿ ಮತ್ತು 1962 ನೇ ಇಸವಿಯಲ್ಲಿ ನಡೆದ 3 ಕೊಲೆಗಳ ಪ್ರಕರಣವಲ್ಲಿ ಒಂದೂ ಸಾಬೀತಾಗಿಲ್ಲ ಎಂದು ಹೇಳಿದ್ದೀರಿ, ಅದಕ್ಕೆ ಕಾರಣಗಳೇನೆಂಬುದನ್ನು ಹೇಳುತ್ತೀರಾ?

Sri R. M. PATIL.—In 1961 there was only one case and the accused was acquitted. It is not necessarily because of defective investigation but because of the resilence of the witnesses.

ಶ್ರೀ ಬಿ. ಜೆ. ಲಿಂಗೇಗೌಡ.—ಆ ಕೇಸುಗಳನ್ನು ತನಿಖೆ ಮಾಡತಕ್ಕ ತನಿಖಾಧಿಕಾರಿಗಳು ಸರಿಯಾಗಿ ತನಿಖೆಯನ್ನು ಮಾಡದೆ ಇರುವುದರಿಂದ ಆ ತಪ್ಪುಗಳು ಸಾಬೀತಾಗಿಲ್ಲ ಎಂದು ಕೋರ್ಟುಗಳು ಅಭಿಪ್ರಾಯಪಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

Sri R. M. PATIL.—It is not the only ground. The main ground for the acquittal is want of sufficient, satisfactory evidence from witnesses.

Sri GANJI VEERAPPA.—May I know whether Government wil take note of the remarks passed by the Judges against the investigating officers and suitably punish them?

Sri R. M. PATIL.—Certainly. So many judgments have been scrutinised and many officers are proceeded against and punished also. Steps are being taken.

ಶ್ರೀ ಸಿ. ಆರ್. ರಂಗೇಗೌಡ.—ಚೆನ್ನಪಟ್ಟಣ ತಾಲ್ಲೂಕಿನಲ್ಲಿ 5 ಕೊಲೆಗಳು ಸಂಭವಿಸಿವೆ ಎಂದು ಹೇಳಿದ್ದೀರಿ, ಹಳ್ಳಿಗಳಲ್ಲಿ ಸಣ್ಣಪುಟ್ಟ ವ್ಯಾಜ್ಯಗಳಾದಾಗ ಅವುಗಳ ಪೋಲೀಸಿನವರು ಹೋದಾಗ ಆ ವಾಜ್ಯಗಳ ಸಂಬಂಧದಲ್ಲಿ ಸ್ಥಳೀಯ ಮುಖಂಡರುಗಳು ಪ್ರವೇಶಮಾಡಿ ನ್ಯಾಯವಾಗಿರುವುದನ್ನು ಅನ್ಯಾಯವಾಗಿ ಮಾಡುವುದರಿಂದ ಅವರ ಜನಗಳು ಉದ್ರೇಕಗೊಂಡು ಅಂಥಾ ಕೊಲೆಗಳು ಆಗುವುದಕ್ಕೆ ಕಾರಣವಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಆರ್. ಎಂ. ಪಾಟೀಲ್.—ಇಂಥಾ ವೇಗ್ ಕ್ವೆಶ್ಚನ್‌ಗಳಿಗೆ ಉತ್ತರವನ್ನು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ಈ ಪ್ರಶ್ನೆಗೆ ಉತ್ತರವಾಗಿ 1963 ನೇ ಸಾಲಿನಲ್ಲಿ ಆಗಿರುವ ಎರಡು ಕೊಲೆ ಪ್ರಕರಣಗಳ ಪೈಕಿ ಒಂದು ಪ್ರಕರಣವು ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿದೆ ಮತ್ತೊಂದು ಪ್ರಕರಣದ ಸಂಬಂಧದಲ್ಲಿ ಪೋಲೀಸಿನವರು ತನಿಖೆಯನ್ನು ಇನ್ನೂ ನಡೆಸುತ್ತಿದ್ದಾರೆಂದು ಹೇಳಿದ್ದಾರೆ. ನಮ್ಮ ಸಮಾಜಕಲ್ಯಾಣ ಶಾಖಾ ಸಚಿವರು ಮೈಸೂರಿನಿಂದ ಬೆಂಗಳೂರಿಗೆ ಬರುವಾಗ ದಾರಿಯಲ್ಲಿ ನಡೆದ ಕೊಲೆಯೂ ಇದರಲ್ಲಿ ಸೇರಿದೆಯೇ?

ಶ್ರೀ ಆರ್. ಎಂ. ಪಾಟೀಲ್.—ಅದೂ ಸೇರಿದೆ.

ಶ್ರೀ ಬಿ. ಜೆ. ಲಿಂಗೇಗೌಡ.—ನನ್ನ ಪ್ರಶ್ನೆಗೆ ಉತ್ತರವನ್ನು ಕೊಟ್ಟಿರುವುದರಲ್ಲಿ 3 ವರ್ಷಗಳಲ್ಲಿ ನಡೆದಿರತಕ್ಕ ಕೊಲೆ ಪ್ರಕರಣಗಳನ್ನು ಕೊಟ್ಟಿದ್ದೀರಿ, ಆದರೆ ನಮ್ಮ ತಾಲ್ಲೂಕಿನಲ್ಲಿ ಈಗ 10 ವರ್ಷಗಳಿಂದಲೂ ನಡೆದಿರತಕ್ಕ ಕೊಲೆ ಪ್ರಕರಣದಲ್ಲಿ ಇದುವರೆಗೂ ಒಂದೂ ಸಾಬೀತು ಆಗಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಆರ್. ಎಂ. ಪಾಟೀಲ್.—ಇದು 10 ವರ್ಷಗಳಿಗೆ ಸಂಬಂಧಪಟ್ಟ ಪ್ರಶ್ನೆ ಅಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಂಥಾ ಪ್ರಕರಣಗಳನ್ನು ಸರಿಯಾದ ರೀತಿಯಲ್ಲಿ ಇನ್‌ವೆಸ್ಟಿಗೇಷನ್ ಮಾಡಿ ಸತ್ಯಾಂಶಗಳನ್ನು ಕಂಡುಹಿಡಿದು ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಲು ಅನುಕೂಲವಾಗುವಂತೆ ಪೋಲೀಸಿನವರಿಗೆ ಏನಾದರೂ ಒಂದು ಸಹಾಯಮಾಡುವುದಕ್ಕೆ ಸಾಧ್ಯವಿದೆಯೇ?

Mr. SPEAKER.—It is disallowed. It is outside the scope of the question.

Construction of a pick-up to Bandihalla near Arehosahalli Village in Sathanoor Hobli, Kanakapura Taluk.

*Q.—88. Sri K. L. SHIVALINGE GOWDA (Virupakshipura).—

Will the Government be pleased to state :—

(*a*) whether it is a fact that a pick-up was constructed to "Bandihalla" near Arehosahalli village, Sathanoor Hobli, Kanakapura Taluk, at an approximate cost of Rs. 9,000;

(*b*) if so, whether it has come to their notice that a large quantity of water in the said halla is being wasted or misused;

(*c*) whether they intend to take necessary steps to ensure supply of water to the ryots?

*A.—Sri ALUR HANUMANTHAPPA (Minister for Minor Irrigation).—

(*a*) Yes.
(*b*) No.
(*c*) Yes.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಕನಕಪುರ ತಾಲ್ಲೂಕು ಸಾತನೂರು ಹೋಬಳಿ, ಅರೇ ಹೊಸಳ್ಳಿ ಗ್ರಾಮದ ಬಳಿ ಇರುವ 'ಬಂಡಿಹಳ್ಳಕ್ಕೆ' ಪಿಕಪ್ ಒಂದನ್ನು ನಿರ್ಮಿಸಿದ ಮೇಲೆ ಇದುವರೆಗೂ ಒಂದು ವರ್ಷವೂ ಅಲ್ಲ ಬೆಳೆಯಾಗಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

† ಶ್ರೀ ಆಲೂರು ಹನುಮಂತಪ್ಪ.—ಆ ತರಹ ಏನೂ ಇಲ್ಲ. ಮೊನ್ನೆ ಮಾಕಸೂನ್‌ನಲ್ಲಿ ಆ ಪಿಕಪ್ಪಿಗೆ ಸ್ವಲ್ಪ ಡ್ಯಾಮೇಜಾಗಿತ್ತು, ಅದನ್ನು ರಿಪೇರಿ ಮಾಡಿಕೊಡುತ್ತೇವೆಂದು ಇಂಜಿನಿಯರು ಸರ್ಕಾರಕ್ಕೆ ರಿಪೋರ್ಟ್ ಮಾಡಿದ್ದಾರೆ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಆ ಪಿಕಪ್ಪಿನ ಕಟ್ಟಡ ಸರಿಯಾಗಿಲ್ಲದೆ ಅದರ ಕೆಳಗಡೆ ನೀರು ಹೋಗುತ್ತಿದೆ ಎಂಬುದು ಸರ್ಕಾರದವರು ಗಮನಕ್ಕೆ ಬಂದಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಆ ಕಟ್ಟಡ ಸ್ವಲ್ಪ ಡ್ಯಾಮೇಜಾಗಿದೆ. ತಕ್ಷಣ ಅದನ್ನು ರಿಪೇರಿ ಮಾಡಿಕೊಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕಟ್ಟಡ ಇದ್ದಹಾಗೆಯೇ ಇದೆ, ಆದರೆ ಅದರಲ್ಲಿ ಕೆಳಗಡೆ ನೀರು ಹೋಗುತ್ತಿದೆ ಎಂದು ಶ್ರೀಮಾನ್ ಶಿವಲಿಂಗೇ ಗೌಡರು ಹೇಳುತ್ತಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದನ್ನು ಸ್ವಲ್ಪ ಯೋಚನೆ ಮಾಡಬೇಕು.

ಶ್ರೀ ಆಲೂರು ಹನುಮಂತಪ್ಪ.—ನೀರು ಪಿಕಪ್ಪಿನ ಕೆಳಗಡೆ ಏನೂ ಹೋಗುವುದಿಲ್ಲ. ಆ ಪಿಕಪ್ ಫ್ಲಡ್ಸ್‌ನಿಂದ ಸ್ವಲ್ಪ ಡ್ಯಾಮೇಜಾಗಿದೆ. ಅದನ್ನು ರಿಪೇರಿ ಮಾಡಿದರೆ ಅದು ಸರಿಹೋಗುತ್ತದೆ. ಮಾನ್ಯ ರೇವಣಸಿದ್ಧಪ್ಪನವರು ಆ ವಿಚಾರದಲ್ಲಿ ಗಾಬರಿಯೇನು ಪಡಬೇಕಾಗಿಲ್ಲ.